
# ‘ಜೀವನೇ ಶಿವ’

ಸ್ವಾಮಿ ರಾಘವೇಶಾನಂದ

**ಭ**ಗವಾನ್ ಶ್ರೀರಾಮಕೃಷ್ಣರು ತಮ್ಮ ಜೀವಿತದ ಬಹುಭಾಗವನ್ನು ಭಗವಂತನ ವಿಷಯವಾಗಿ ವಿಚಾರ ಮಾಡುವುದರಲ್ಲೂ, ಆ ಚಿಂತನೆಯಲ್ಲಿ ಮತ್ತೆ ಮತ್ತೆ ಸಮಾಧಿಸ್ಥಿತಿಗೆ ತಲುಪಿ ಅವರ್ಣನೀಯ ಆನಂದವನ್ನು ಅನುಭವಿಸುವುದರಲ್ಲೂ ಕಳೆಯುತ್ತಿದ್ದರು. ಆದರೂ ಸಹ ಅವರ ಹೃದಯದ ಒಂದು ಮೂಲೆಯಲ್ಲಿ ದೀನದಲಿತರ ಬವಣೆಗಾಗಿ ಶ್ರಮಿಸಲು, ಅವರ ದಾರಿದ್ರ್ಯವನ್ನು ಹೋಗಲಾಡಿಸಲು ಗೈಯುವ ಸೇವೆಗೊಂದು ಆಧ್ಯಾತ್ಮಿಕ ಅರ್ಥವನ್ನು ನೀಡಲು ಚಿಂತನ ಮಂಥನ ಸಾಗುತ್ತಿತ್ತು. **‘ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ’** – ಒಳಗಡೆ ಹೊರಗಡೆ ಎಲ್ಲೆಡೆ ಭಗವಂತನೇ ವ್ಯಾಪಿಸಿದ್ದಾನೆ ಎಂಬ ವೇದವಾಕ್ಯವನ್ನು ಅವರು ಜೀವನದಲ್ಲಿ ಸಾಕ್ಷಾತ್ಕರಿಸಿಕೊಂಡಿದ್ದರು. ಅದು ಆ ವಿರಾಟ್ ಭಗವಂತನನ್ನು ದೀನದಲಿತರಲ್ಲಿ ಕಂಡು ಸೇವೆ ಸಲ್ಲಿಸುವ ರೂಪದಲ್ಲಿ, ಕಾರ್ಯರೂಪದಲ್ಲಿ ವ್ಯಕ್ತವಾಯಿತು; ಅದಲ್ಲದೆ, ಶ್ರೀರಾಮಕೃಷ್ಣರ **‘ಜೀವನೇ ಶಿವ’** ಎಂಬ ಮಹಾಮಂತ್ರವು ಮುಂದೆ ಸಂಸ್ಥಾಪನೆಗೊಂಡ ರಾಮಕೃಷ್ಣ ಮಹಾಸಂಘದ ದೀಕ್ಷಾಮಂತ್ರವೂ ಆಯಿತು. ಈ ಎಲ್ಲ ಮಹಾನ್ ಕಾರ್ಯಗಳು ಹೇಗೆ ಜರುಗಿದವು? ಇದಕ್ಕೆ ಶ್ರೀರಾಮಕೃಷ್ಣರ ಹಾಗೂ ಅವರ ಮಹಾನ್ ಶಿಷ್ಯ ಸ್ವಾಮಿ ವಿವೇಕಾನಂದರ ಜೀವನದ ಕೆಲವು ಘಟನೆಗಳನ್ನು ಪರಾಮರ್ಶಿಸಬೇಕಾಗುತ್ತದೆ.



ಶ್ರೀರಾಮಕೃಷ್ಣರು ಮಥುರನಾಥ ಮತ್ತಿತರರೊಂದಿಗೆ ಕಾಶೀಯಾತ್ರೆ ಹೊರಟರು. ಮಥುರನಾಥ ಶ್ರೀಮಂತ. ಅವನ ಶ್ರೀಮಂತಿಕೆಗೆ ತಕ್ಕಂತೆ, ಅದರಲ್ಲಿಯೂ ತನ್ನ ಆರಾಧ್ಯದೈವವಾದ ಶ್ರೀರಾಮಕೃಷ್ಣರಿಗೆ ಸ್ವಲ್ಪವೂ ಅನಾನುಕೂಲವಾಗಬಾರದೆಂದು ಸ್ವಲ್ಪ ವಿಜೃಂಭಣೆಯಿಂದಲೇ ಯಾತ್ರೆಯ ಏರ್ಪಾಟು ಮಾಡಿದ್ದ.

ಶ್ರೀರಾಮಕೃಷ್ಣರನ್ನೊಡಗೂಡಿದ ಯಾತ್ರಿಕ ತಂಡ ಮೊದಲು ವೈದ್ಯನಾಥನ ದರ್ಶನಕ್ಕಾಗಿ ದೇವಘರದಲ್ಲಿ ನಿಂತಿತು. ಒಂದು ದಿನ ಶ್ರೀರಾಮಕೃಷ್ಣರು ಸಮೀಪದ ಯಾವುದೋ ಒಂದು ಗ್ರಾಮದ ಮೂಲಕ ಹೋಗುತ್ತಿದ್ದರು. ಅದಾವುದೋ ದಟ್ಟ ದರಿದ್ರ ಹಳ್ಳಿ ಎಲ್ಲಿ ನೋಡಿದರಲ್ಲಿ ದಾರಿದ್ರ್ಯ ಕಂಡು ಬರುತ್ತಿದೆ. ಶ್ರೀರಾಮಕೃಷ್ಣರಿಗೆ ಬಡತನವೇನೂ ಹೊಸದಲ್ಲ. ಅವರು ಹುಟ್ಟಿದ ಕಾಮಾರಪುಕುರ ಇದಕ್ಕೆ ಹೊರತಲ್ಲ. ಆದರೆ ಈಗ ಅವರು ಭಗವಂತನ ವಿವಿಧ ಭಾವಗಳನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆ. ಅವರ ಹೊರನೋಟ ಹೊಸರೂಪ ತಾಳಿದೆ. ಅವರ ಕಣ್ಣಿಗೆ ಬಿದ್ದ ದೃಶ್ಯವು, ತಮ್ಮ ಆರಾಧ್ಯದೇವತೆ ಕಾಳಿಯೇ ಈ ದೀನದಲಿತರ ರೂಪದಲ್ಲಿ ದೈನ್ಯಾವಸ್ಥೆಯಲ್ಲಿದ್ದಾಳೆ, ಇವರ ಮೂಲಕ ಅವಳ ಸೇವೆ ಸಲ್ಲಿಸಬೇಡವೇ ಎಂಬ ಭಾವವನ್ನು ಅವರಲ್ಲಿ ಮೂಡಿಸಿತು. ಆ ಜನರ ದೀನಾವಸ್ಥೆಯನ್ನು ನೋಡಿದಾಗ ಅವರ ಹೃದಯ ಕರಗಿ ಕಣ್ಣೀರಾಗಿ ಚಿಮ್ಮಿತು. ಅವರೆಲ್ಲ ಅವರವರ ಕರ್ಮಕ್ಕೆ ಅನುಸಾರವಾಗಿ ಕಷ್ಟ ಅನುಭವಿಸುತ್ತಿದ್ದಾರೆ ಎಂಬ ಒಣ ವೇದಾಂತ ನುಡಿದು, ತಮ್ಮ ತೀರ್ಥಯಾತ್ರೆಯನ್ನು ಮುಂದುವರಿಸುವ ಹೃದಯ ಶ್ರೀರಾಮಕೃಷ್ಣರದ್ದಲ್ಲ. ಆದರೆ ಆ ಹಳ್ಳಿಗರಿಗೆ ಕೊಡಲು ತಮ್ಮದೆಂಬುದು ಅವರ ಬಳಿ ಏನು ತಾನೆ ಇದೆ? ಆದ್ದರಿಂದ ಅವರು ಮಥುರನಿಗೆ ಹೇಳಿದರು, “ಮಥುರ, ನೋಡಿದೆಯಾ ಇವರ ಅವಸ್ಥೆಯನ್ನು? ಇವರು ತಮ್ಮ ಜನ್ಮದಲ್ಲಿ

> ಶ್ರೀರಾಮಕೃಷ್ಣರು ಭಗವಂತನ ಸಾನ್ನಿಧ್ಯವನ್ನು ಸರ್ವ ಜೀವಿಗಳಲ್ಲೂ ಕಂಡವರು. ಹಾಗೆಯೇ ಎಲ್ಲ ಜೀವಿಗಳನ್ನೂ ಈಶ್ವರಭಾವದಿಂದ ಕಂಡು ಉಪಾಸಿಸಬೇಕೆಂದು ಅವರು ಬೋಧಿಸಿದರು. ಈ ಬೋಧನೆಯ ಮಹತ್ವವನ್ನು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರಾದ ಪೂಜ್ಯ ಸ್ವಾಮೀಜಿಯವರು ನಿರೂಪಿಸಿದ್ದಾರೆ. ಇವರು ಉತ್ತಮ ವಾಗ್ಮಿಗಳು, ಬರಹಗಾರರು. ಇವರ ಅನೇಕ ಪುಸ್ತಕಗಳು ಪ್ರಕಟವಾಗಿವೆ.

> ದೇವರನ್ನು ನೋಡಬಯಸುತ್ತೀಯೇನು? ಮೊದಲು ಅವನನ್ನು ಮನುಷ್ಯನಲ್ಲಿ ನೋಡಲು ಕಲಿ. ಅವನಲ್ಲಿ ದಿವ್ಯತೆ ಎಲ್ಲಕ್ಕಿಂತಲೂ ಹೆಚ್ಚು ಪ್ರಕಾಶಗೊಂಡಿದೆ.
>
> – ಶ್ರೀರಾಮಕೃಷ್ಣ

ಒಂದೇ ಒಂದು ಬಾರಿಯಾದರೂ ಹೊಟ್ಟೆ ತುಂಬ, ಮನಸ್ಸು ತೃಪ್ತಿಯಾಗುವಂತೆ ಉಂಡಿರಲಾರರು. ಇವರ ತಲೆಗೂದಲೆಲ್ಲಾ ಜಡೆಗಟ್ಟಿದೆ. ಎಣ್ಣೆ ನೀರು ಕಂಡು ಎಷ್ಟು ವರ್ಷಗಳಾದವೋ! ಬಟ್ಟೆಯೆಂತೂ ಚಿಂದಿ ಚಿಂದಿ. ಇವರಿಗೇನಾದರೂ ಸ್ವಲ್ಪ ಸಹಾಯ ಮಾಡುವುದು ನಿನ್ನ ಧರ್ಮ. ಈಗ ನೀನು ಇವರಿಗೆಲ್ಲಾ ತಲೆಗೆ ಹಚ್ಚಲು ಎಣ್ಣೆ, ಒಂದು ದಿನ ಹೊಟ್ಟೆ ತುಂಬ ಊಟ ಹಾಗೂ ಒಬ್ಬೊಬ್ಬರಿಗೆ ಒಂದೊಂದು ಬಟ್ಟೆ – ಇಷ್ಟನ್ನು ಒದಗಿಸಿಕೊಡು. ನನಗಾಗಿ ಇಷ್ಟನ್ನು ಮಾಡುತ್ತೀಯಾ?"

ಮಥುರ ಗಾಬರಿಗೊಂಡ, "ಅಪ್ಪಾ, ನಮ್ಮ ತೀರ್ಥಯಾತ್ರೆಗೆ ಬಹಳ ಖರ್ಚಿದೆ. ತೀರ್ಥಯಾತ್ರೆಯಲ್ಲಾ ಮುಗಿದ ಮೇಲೆ ನಿಮ್ಮ ಇಚ್ಛೆ ಪೂರೈಸುತ್ತೇನೆ. ಈಗ ಕಾಶಿಯತ್ತ ಹೊರಡೋಣ" ಎಂದ. ಶ್ರೀರಾಮಕೃಷ್ಣರ ಹೃದಯದಲ್ಲಿ ಒಂದು ಅಪೂರ್ವ ಆವೇಶವುಂಟಾಯಿತು. "ಹೋಗೋ ಹುಚ್ಚ, ನಿನ್ನ ಕಾಶೀಯಾತ್ರೆ ಯಾರಿಗೆ ಬೇಕಾಗಿದೆ? ಇಲ್ಲಿರುವವರೆಲ್ಲಾ ಜೀವಂತ ಶಿವರು. ಪಾಪ, ಇವರಿಗೆ ಯಾರೂ ದಿಕ್ಕಿಲ್ಲ. ನಾನಿವರನ್ನು ಬಿಟ್ಟು ಹೋಗಲಾರೆ" ಎಂದು ಹೇಳಿ ಅವರ ಮಧ್ಯೆ ಕುಳಿತುಬಿಟ್ಟರು. ಅವರ ದಯಾರ್ದ್ರ ಹೃದಯನನ್ನು ಕಂಡು ಮಥುರನೂ ಕರಗಿಹೋದ. ಕೂಡಲೇ ಆ ಜನರಿಗೆಲ್ಲಾ ಎಣ್ಣೆ, ಬಟ್ಟೆ, ಊಟದ ವ್ಯವಸ್ಥೆ ಮಾಡಿದ.

ತೃಪ್ತಿಗೊಂಡ ಶ್ರೀರಾಮಕೃಷ್ಣರ ಮುಖ ಸಮಾಧಿಸ್ಥಿತಿಯಲ್ಲಿ ಪ್ರಕಟವಾಗುತ್ತಿದ್ದ ಪರಿಪೂರ್ಣ ಆನಂದದ ಭಾವವನ್ನು ಹೊರಸೂಸಲಾರಂಭಿಸಿತು; ಕಾಶಿಯ ವಿಶ್ವನಾಥನಿಗೆ ಅಭಿಷೇಕ, ವಸ್ತ್ರ ಧಾರಣೆ, ನೈವೇದ್ಯವನ್ನು ಅರ್ಪಿಸಿದ ಪೂರ್ಣಭಾವವನ್ನು ತಾಳಿತು.

ಇದು ಇಷ್ಟಕ್ಕೇ ಮುಗಿಯಬೇಕಲ್ಲ! ಈ ಮಹಾಮಂತ್ರವನ್ನು ಇಡೀ ಜಗತ್ತಿಗೆ ಸಾಧಿಸಿ ತೋರಿಸುವ, ಬೋಧಿಸುವ ಮಹಾ ಕಾರ್ಯವನ್ನು ನೆರವೇರಿಸುವ ಇನ್ನೊಂದು ಜೀವಕ್ಕಾಗಿ ಈ ಮಹಾಜೀವ ಚಡಪಡಿಸುತ್ತಿತ್ತು. ಶುದ್ಧ ಸಾತ್ವಿಕವಾದ ಶ್ರೀರಾಮಕೃಷ್ಣರ ಶರೀರ ಪ್ರಪಂಚದಾದ್ಯಂತ ಸುತ್ತಿ ಈ ಕಾರ್ಯವನ್ನು ನೆರವೇರಿಸಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿಯೇ ಅವರು ನರೇಂದ್ರನನ್ನು ಆರಿಸಿಕೊಂಡು, ತಮ್ಮ ತಪಃಶಕ್ತಿಯನ್ನೆಲ್ಲಾ ಆತನಿಗೆ ಧಾರೆಯೆರೆದರು. ಒಂದು ದಿನ ಅವನೆಡೆಗೆ ಪ್ರೀತಿಯ ನೋಟ ಬೀರಿ, "ನಿನಗೇನು ಬೇಕು?" ಎಂದರು. ಆ ಗಳಿಗೆಗಾಗಿ ಕಾದಿದ್ದ ನರೇಂದ್ರ, "ಗುರುದೇವ, ನಿಮ್ಮಂತೆ ನಾನೂ ಸರ್ವದಾ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗಿರಬೇಕೆಂಬುದೇ ನನ್ನ ಮಹದಭಿಲಾಷೆ" ಎಂದನು.

ಗುರುದೇವರು ಸ್ವಲ್ಪ ಅಧೀರರಾಗಿ "ಮರಳಿ ಮರಳಿ ಅದೇ ಕತೆ ಹೇಳಲು ನಿನಗೆ ನಾಚಿಕೆಯಾಗದೆ? ಇಷ್ಟು ಕಾಲ ಮಹಾ ವಟವೃಕ್ಷದಂತೆ ಬೆಳೆದಿರುವೆ; ಸಾವಿರಾರು ಜನರಿಗೆ ನೆಮ್ಮದಿಯನ್ನು ನೀನು ನೀಡಬೇಕಾಗಿದೆ. ಇದನ್ನು ಬಿಟ್ಟು ನಿನ್ನ ಸ್ವಂತ ಮುಕ್ತಿಗಾಗಿ ಕಾತರನಾಗಿರುವೆಯಲ್ಲಾ ! ಎಂತಹ ಕ್ಷುದ್ರ ಆದರ್ಶ ನಿನ್ನದು! ಕಣ್ಣುಮುಚ್ಚಿ ಭಗವಂತನನ್ನು ಕಾಣುವುದು ಜ್ಞಾನ. ನಾನು ನಿನಗೆ ವಿಜ್ಞಾನದ ಮಾರ್ಗವನ್ನು ತೋರಿಸಲಿಚ್ಛಿಸುವೆನು. ಕಣ್ಣು ತೆರೆದು ಆ ಭಗವಂತನೇ ಪ್ರತಿ ಜೀವಿಯಲ್ಲಿಯೂ ಇದ್ದಾನೆ ಎನ್ನುವುದನ್ನು ಕಾಣು" ಎಂದರು. ನರೇಂದ್ರನಿಗೆ ಇದನ್ನು ಅರ್ಥಮಾಡಿಕೊಳ್ಳಲು ಹಲವಾರು ವರ್ಷಗಳೇ ಹಿಡಿದವು. ಇದು ಸಾಮಾನ್ಯ ಸಾಕ್ಷಾತ್ಕಾರವೇ! ವಿಶೇಷ ಅಧಿಕಾರಿಗಳಿಗೆ ಮಾತ್ರ ಮೀಸಲಾದುದು. ಶ್ರೀಕೃಷ್ಣ ಅರ್ಜುನನಿಗೆ ಧ್ಯಾನ ಪದ್ಧತಿಯನ್ನು ವಿವರಿಸಿ, ಆ ಧ್ಯಾನದಿಂದ ಪಡೆಯಬೇಕಾದ ಫಲವನ್ನು ಹೀಗೆ ವಿವರಿಸುತ್ತಾನೆ:

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥

"ಯಾರು ನನ್ನನ್ನು ಎಲ್ಲೆಲ್ಲಿಯೂ ನೋಡುವನೋ, ಎಲ್ಲವನ್ನೂ ನನ್ನಲ್ಲಿಯೇ ನೋಡುವನೋ, ಅವನಿಗೆ ನಾನು ಸರಿಯಾಗಿ ಕಾಣದೆ ಹೋಗುವುದಿಲ್ಲ. ಹಾಗೆಯೇ ಅವನು ನನಗೆ ಸರಿಯಾಗಿ ಕಾಣದೆ ಹೋಗುವುದಿಲ್ಲ." (೬.೩೦)

ಇದು ಆಧ್ಯಾತ್ಮಿಕ ಸಾಧನೆಯ ಅಂತಿಮ ಫಲ. ಇದಾದ ಮೇಲೆ ಸಾಧಿಸಬೇಕಾದುದು ಏನೂ ಉಳಿಯುವುದಿಲ್ಲ. ಅಂತಹ ಜ್ಞಾನವನ್ನು ಶ್ರೀರಾಮಕೃಷ್ಣರು ನರೇಂದ್ರನಿಗೆ ಧಾರೆಯೆರೆದರು.

ಒಮ್ಮೆ ಶ್ರೀರಾಮಕೃಷ್ಣರು ತಮ್ಮ ಕೋಣೆಯಲ್ಲಿ ತಮ್ಮ ಶಿಷ್ಯರೊಂದಿಗೆ ಕುಳಿತಿದ್ದರು. ಒಬ್ಬ ಭಕ್ತ, ಚೈತನ್ಯ ಮಹಾಪ್ರಭುಗಳ ಉಪದೇಶಗಳ ಪುಸ್ತಕವನ್ನು ಓದುತ್ತಿದ್ದ. ಒಂದೆಡೆ ಜೀವರಲ್ಲಿ ದಯೆ ತೋರಿಸಬೇಕು ಎಂದು ಓದಿದ. ಅದನ್ನು ಕೇಳಿದ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು. ಸ್ವಲ್ಪ ಹೊತ್ತಾದ ಬಳಿಕ ಅರ್ಧಭಾವಾವಸ್ಥೆಗೆ ಇಳಿದು, ತಮ್ಮಷ್ಟಕ್ಕೆ ಎಂಬಂತೆ ಉದ್ಗರಿಸಿದರು, "ಏನು, ಜೀವರಲ್ಲಿ ದಯೆ! ಜೀವರಲ್ಲಿ ದಯೆ! ಓ, ಹುಲು ಮಾನವ! ಜೀವರಲ್ಲಿ ದಯೆತೋರಲು ನೀನು ಯಾರು?! ಇಲ್ಲ, ಅದು ಸಾಧ್ಯವಿಲ್ಲ. ಜೀವರಿಗೆ ದಯೆ ತೋರುವುದಲ್ಲ. ಜೀವರಿಗೆ ನೀನು ಮಾಡಬೇಕಾದದ್ದು ಸೇವೆ. ಜೀವನಲ್ಲಿ ಶಿವನನ್ನು ಕಂಡು ಸೇವೆ ಮಾಡಬೇಕು. **ಜೀವನಲ್ಲ ಶಿವ, ಜೀವನಲ್ಲ ಶಿವ.**"

ಅಲ್ಲಿ ಕುಳಿತವರೆಲ್ಲಾ ಮುಗ್ಧಭಾವದಿಂದ ಪರಮಹಂಸರ ಮಾತನ್ನು ಕೇಳುತ್ತಿದ್ದರು. ಅದು ನರೇಂದ್ರನ ಮೇಲೆ ಒಂದು ವಿಶೇಷ ಪರಿಣಾಮವನ್ನು ಉಂಟುಮಾಡಿತು. ಅದರಲ್ಲಿ ಅವನು

ಗೂಢಾರ್ಥವನ್ನು ಕಂಡುಕೊಂಡನು. ಕೋಣೆಯಿಂದ ಹೊರ ಬಂದ ಮೇಲೆ ಅವನು ತಾನು ಕಂಡುಕೊಂಡ ವಿನೂತನ ವಿಚಾರಗಳನ್ನು ಇತರರ ಮುಂದೆ ಉತ್ಸಾಹದಿಂದ ಹೀಗೆ ಬಣ್ಣಿಸಿದ: "ಇಂದು ನಾನು ಶ್ರೀರಾಮಕೃಷ್ಣರ ಈ ಉಪದೇಶದಿಂದ ಅದ್ಭುತ ವಾದ ಹೊಸದೊಂದು ಬೆಳಕನ್ನು ಕಂಡುಕೊಂಡೆ. ವೇದಾಂತವು ಬೋಧಿಸುವ ಜ್ಞಾನದ ತತ್ತ್ವದೊಂದಿಗೆ ಭಕ್ತಿಯ ಆದರ್ಶವನ್ನು ಅವರು ಎಷ್ಟು ಸುಂದರವಾಗಿ ಸಮನ್ವಯಗೊಳಿಸಿದರು! ಪ್ರೀತಿ ಅನುಕಂಪವೇ ಮೊದಲಾದ ಮಾನವಸಹಜ ಭಾವನೆಗಳಿಗೆ ವೇದಾಂತದ ತತ್ತ್ವಗಳೆಲ್ಲ ಒಗ್ಗುವುದಿಲ್ಲ ಎಂಬುದು ಸಾಮಾನ್ಯವಾದ ನಂಬಿಕೆ. ಇತರರು ಅವುಗಳನ್ನು ವ್ಯಾಖ್ಯಾನ ಮಾಡುವಾಗಲೂ ಅದು ನಿಜವೆಂದೇ ಭಾಸವಾಗುತ್ತದೆ. 'ಜ್ಞಾನಯೋಗವನ್ನು ಅಭ್ಯಾಸ ಮಾಡಬೇಕಾದರೆ ಸಮಾಜದಿಂದ ದೂರವಿರಬೇಕು. ಪ್ರೇಮ, ಭಕ್ತಿ, ಅನುಕಂಪ ಇವೂ ಎಲ್ಲಾ ಮಾಯೆಯೇ. ಇಂತಹ ಭಾವನೆಗಳನ್ನು ಮನಸ್ಸಿನಿಂದ ಬೇರುಸಹಿತ ಕಿತ್ತು ಹಾಕಬೇಕು.' – ವೇದಾಂತವನ್ನು ಜನ ಅರ್ಥಮಾಡಿಕೊಂಡಿರುವ ಬಗೆ ಹೀಗೆ. ಆದರೆ, ಶ್ರೀರಾಮಕೃಷ್ಣರು ದಿವ್ಯಭಾವದಲ್ಲಿ ನುಡಿದ ಈ ವಿವೇಕವಾಣಿಯನ್ನು ಕೇಳಿದಾಗ ಮೇಲೆ ಹೇಳಿದ ಎಲ್ಲ ಶಾಸ್ತ್ರವಿಷಯಗಳೂ ನನಗೆ ಅರ್ಥವಾಯಿತು. ಸಾಧಕರೆನ್ನುವವರು ಸಮಾಜದಿಂದ ದೂರವಿರಬೇಕಾಗಿಲ್ಲ. ತಮ್ಮ ನಿತ್ಯಜೀವನ ದಲ್ಲಿಯೇ ಅವರು ಆದರ್ಶಗಳನ್ನು ಆಚರಣೆಗೆ ತರಬಹುದು. ಒಬ್ಬ ಮನುಷ್ಯ ಯಾವ ಕ್ಷೇತ್ರದಲ್ಲೇ ಇರಲಿ, ಯಾವ ಉದ್ಯೋಗ ದಲ್ಲೇ ಇರಲಿ, ಅವನು ತಿಳಿದಿರಬೇಕಾದ ಒಂದು ಸತ್ಯವೆಂದರೆ ಸ್ವಯಂ ಭಗವಂತನೇ ಈ ಜಗತ್ತಾಗಿ ಮತ್ತು ಜೀವಕೋಟಿಗಳಾಗಿ ವ್ಯಕ್ತಗೊಂಡಿದ್ದಾನೆ ಎಂದು. ಭಗವಂತನ ಇಚ್ಛೆಯಿದ್ದರೆ, ಕಾಲ ಬಂದಾಗ ನಾನು ಈ ಮಹತ್ತತ್ತ್ವವನ್ನು ಜಗತ್ತಿಗೆ ಬೋಧಿಸುವೆ, ಇದನ್ನು ಸರ್ವರ ಸ್ವತ್ತನ್ನಾಗಿಸುವೆ. ಬುದ್ಧಿವಂತರು–ಮೂರ್ಖರು, ಶ್ರೀಮಂತರು–ದರಿದ್ರರು, ಬ್ರಾಹ್ಮಣರು–ಅಸ್ಪೃಶ್ಯರು, ಎಲ್ಲರೂ ಈ ಸತ್ಯವನ್ನು ಅರಿಯುವಂತೆ ಮಾಡುತ್ತೇನೆ!"

ಮೇಲೆ ಹೇಳಿದ ತತ್ತ್ವ ಮತ್ತು ಯೋಗಗಳ ಸಮಾಗಮ ಎಂತಹ ಅದ್ಭುತವಾದುದು! ಇಲ್ಲಿ ಸೇವೆಯೇ ಪೂಜೆ. ಮನುಷ್ಯ ಒಂದು ಕ್ಷಣವೂ ಸುಮ್ಮನೆ ಕುಳಿತುಕೊಳ್ಳಲಾರ ಎಂದು ಶ್ರೀಕೃಷ್ಣ ಪರಮಾತ್ಮ ಗೀತೆಯಲ್ಲಿ ಹೇಳುತ್ತಾನೆ. ನಾವು ಮಾಡುವ ಪ್ರತಿ ಯೊಂದು ಕರ್ಮವನ್ನೂ ಜೀವಿಯ ರೂಪದಲ್ಲಿ ನಡೆದಾಡುತ್ತಿರುವ ಭಗವಂತನ ಸೇವೆಯೆಂದು ಮಾಡಿದರೆ, ಅದು ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗಗಳ ಸಮನ್ವಯವಾಗಿ ಎಂತಹ ಸುಂದರ ಜೀವನವಾಗುತ್ತದೆ! ಆಗ ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಅಡ್ಡಿ ಯಾಗಿರುವ ಅಹಂಕಾರ ತಾನೇ ತಾನಾಗಿ ನಾಶವಾಗುವುದಿಲ್ಲವೇ! ಭಗವಂತನ ಮುಂದೆಯೂ ಅಹಂಕಾರವೇ? ಚರಾಚರ ವಸ್ತು ಗಳೆಲ್ಲಾ ಭಗವಂತನೇ ಎಂಬ ಭಾವನೆ ಬಂದ ಮೇಲೆ ಯಾರ ಮುಂದೆ ಅಹಂಕಾರ! ಯಾರ ಬಗ್ಗೆಯಾದರೂ ದ್ವೇಷ ಅಸೂಯೆ ತಾಳಲು ಸಾಧ್ಯವೇ?!

ಇದನ್ನೇ ಕಪಿಲ ಮುನಿ, ತನ್ನ ತಾಯಿ ದೇವಹೂತಿಗೆ ಕೊಡುವ ಉಪದೇಶದಲ್ಲಿ ತಿಳಿಸುತ್ತಾನೆ: **'ಅನಿಮಿತ್ತಂ ಭಗವತಿ ಭಕ್ತಿಃ ಸಿದ್ಧೇಃ ಗರೀಯಸೀ'** – ಭಕ್ತಿಯು ಮುಕ್ತಿಗಿಂತಲೂ ಶ್ರೇಷ್ಠ (ಭಾಗವತ:೩.೨೫, ೩೩). ಭಕ್ತಿಯಿಂದ ವ್ಯಕ್ತಿಯು ತಾನೂ ವಿಕಾಸ ವಾಗುವುದರ ಜೊತೆಗೆ ಇತರರ ಸಂಕಟವನ್ನೂ ಹೋಗಲಾಡಿಸಿ ಅವರ ಜೀವನಕ್ಕೆ ಸಂತಸವನ್ನು ತರಬಹುದು.

ಶ್ರೀರಾಮಕೃಷ್ಣ ಸಂಪ್ರದಾಯದಲ್ಲಿ ಹಾಗೂ ಶ್ರೀಮಾತೆಯವರ ಉಪದೇಶಗಳಲ್ಲಿ ಕಾಣಬರುವ ಸ್ಪಷ್ಟವಾದ ಅಭಿಪ್ರಾಯವೆಂದರೆ ಆಧ್ಯಾತ್ಮಿಕ ಸಾಧನೆಯಲ್ಲಿ ಮುನ್ನೇರಲು, ಸಾಧಕನಲ್ಲಿ ಆಗಬೇಕಾದ ಪರಿವರ್ತನೆಯೆಂದರೆ, 'ಜೀವಸೇವೆಯೇ ಶಿವಸೇವೆ' ಎನ್ನುವುದನ್ನು ಭಕ್ತಿಭಾವದಿಂದ ಅನುಷ್ಠಾನ ಮಾಡಿ ಹೃದಯವನ್ನು ಅರಳಿಸಿಕೊಳ್ಳ ಬೇಕು ಎನ್ನುವುದು. ಸ್ವಾಮಿ ವಿವೇಕಾನಂದರು ಅಮೆರಿಕಾಕ್ಕೆ ತೆರಳುವ ಮುನ್ನ ತಮ್ಮ ಸೋದರ ಸಂನ್ಯಾಸಿ ತುರೀಯಾನಂದರಿಗೆ ಹೇಳುತ್ತಾರೆ, "ಸಹೋದರ ಹರಿ, ನಿನ್ನ ಧರ್ಮವನ್ನು ನಾನು ಇನ್ನೂ ಸರಿಯಾಗಿ ಅರ್ಥಮಾಡಿಕೊಂಡಿಲ್ಲ." ನಂತರ ದುಃಖ ತುಂಬಿದ ಹೃದಯದಿಂದ ತುರೀಯಾನಂದರ ತೋಳಿನ ಮೇಲೆ ಕೈಯಿಟ್ಟು ತಮ್ಮ ಮನದಾಳದಲ್ಲಿದ್ದ ಭಾವನೆಯನ್ನು ಹೀಗೆ ವ್ಯಕ್ತ ಪಡಿಸಿದರು: "ಆದರೆ ನನ್ನ ಹೃದಯ ವಿಶಾಲವಾಗುತ್ತಿದೆ. ಬೇರೆ ಯವರಿಗಾಗಿ ಮರುಕ ಪಡುತ್ತೇನೆ; ನನ್ನನ್ನು ನಂಬು. ನಿಜ ವಾಗಿಯೂ ಇತರರಿಗಾಗಿ ನನ್ನ ಹೃದಯ ಮಿಡಿಯುತ್ತಿದೆ."

ಈಶೋಪನಿಷತ್ತಿನ ಮೊದಲನೆಯ ನುಡಿಯೇ **'ಈಶಾವಾಸ್ಯಮ್ ಇದಂ ಸರ್ವಂ'** – ಈ ಇಡೀ ಜಗತ್ತನ್ನು ಭಗವಂತನಿಂದ ಆಚ್ಛಾದಿಸಬೇಕು ಎಂದಲ್ಲವೇ? ದರಿದ್ರರ, ದಲಿತರ, ಹಿಂದುಳಿದವರ ಹೃದಯದಲ್ಲಿ ಭಗವಂತನನ್ನು ಕಂಡು, ಅವರ ಸೇವೆ ಮಾಡಿ ಅವರಿಗೆ ಒಂದು ಗೌರವಸ್ಥಾನ ಕೊಟ್ಟು, ಅವರ ಜೀವನದಲ್ಲಿ ಸಂತಸ ತರುವಂತೆ ಮಾಡುವುದು ನಮ್ಮ ಧರ್ಮದ ಅವಿಭಾಜ್ಯ ಅಂಗವಲ್ಲವೇ? ಅದರ ಬದಲು ಅವರನ್ನು ತುಳಿದು, ಅಗೌರವ ದಿಂದ ಕಂಡು, ದೂರವಿಟ್ಟು, ಅಪ್ರತ್ಯಕ್ಷವಾಗಿ ಮತಾಂತರಕ್ಕೆ ಪ್ರೋತ್ಸಾಹಿಸುತ್ತಿರುವ ನಾವು ಧರ್ಮಪಾಲಕರೇ, ಧರ್ಮರಕ್ಷಿತರೇ? ಅಂತಹ ನಮ್ಮ ಮೇಲೆ ಭಗವಂತನ ಕೃಪೆ ಸ್ವಲ್ಪವಾದರೂ ಹರಿದು ಬರುವುದೇ?

ಸಾವಿರಾರು ವರ್ಷಗಳಿಂದ ನಾವು ಜೀವಂತ ದೇವರುಗಳಾದ ದೀನದಲಿತರನ್ನು ತುಳಿದಿಟ್ಟಿದ್ದೇವೆ. ಅವರ ಸೇವೆ ಮಾಡುವುದೇ, ಅವರನ್ನು ಪೂಜಿಸುವುದೇ ಆಧುನಿಕ ಧರ್ಮವಾಗಬೇಕು. ಬನ್ನಿ, ಈ ಕಾರ್ಯಕ್ಕಿಳಿಯೋಣ. ಸ್ವಾಮಿ ವಿವೇಕಾನಂದರ ಘೋಷಣೆಯಾದ **"ಮೂರ್ಖದೇವೋ ಭವ, ದರಿದ್ರದೇವೋ ಭವ"** ಎಂಬ ಮಹಾಮಂತ್ರವನ್ನು ಪಾಲಿಸೋಣ. ನಮ್ಮವರನ್ನು ಉಳಿಸೋಣ, ನಮ್ಮ ಧರ್ಮವನ್ನು ರಕ್ಷಿಸೋಣ, ನಮ್ಮನ್ನು ನಾವು ಉಳಿಸಿಕೊಂಡು ಧನ್ಯರಾಗೋಣ.